**All India Radio: Bangalore**
**National Bulletin In Kannada**
**27.09.2026 19.35 hrs**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

೧. ದೇಶದ ಮೊದಲ ದ್ರವೀಕೃತ ನೈಸರ್ಗಿಕ ಅನಿಲ ಇಂಧನ ರೈಲು ಸೇವೆ ಆರಂಭ

೨. ಜನಗಣತಿಯಲ್ಲಿ ಭಾಗಿಯಾಗುವ ಅಗತ್ಯದ ಬಗ್ಗೆ ಮನ್ ಕಿ ಬಾತ್‌ನಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಪ್ರಸ್ತಾಪ

೩. ನ್ಯಾನೋ ಔಷಧ ಮುಂದಿನ ಪೀಳಿಗೆಯ ನಿಖರ ವೈದ್ಯಕೀಯ ಸೇವೆಗೆ ಪ್ರಮುಖ ಚಾಲಕ - ಕೇಂದ್ರ ಸಚಿವ ಜಿತೇಂದ್ರ ಸಿಂಗ್

೪. ಭಾರತ ಮತ್ತು ವೆಸ್ಟ್ ಇಂಡೀಸ್ ನಡುವಣ ಮೊದಲ ಏಕದಿನ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯ; ಭಾರತಕ್ಕೆ ೨೯೬ ರನ್‌ಗಳ ಗುರಿ

---

ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಗುಜರಾತ್‌ನ ಸಾಬರಮತಿಯಲ್ಲಿಂದು ದೇಶದ ಮೊದಲ ದ್ರವೀಕೃತ ನೈಸರ್ಗಿಕ ಅನಿಲ - ಎಲ್‌ಎನ್‌ಜಿ ಚಾಲಿತ ರೈಲಿಗೆ ಹಸಿರು ನಿಶಾನೆ ತೋರಿದರು. ಜೊತೆಗೆ ೧ ಸಾವಿರದ ೫೦೦ ಕೋಟಿ ರೂಪಾಯಿಗೂ ಅಧಿಕ ಮೊತ್ತದ ಹಲವು ಮಹತ್ವದ ರೈಲ್ವೆ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ, ಶಂಕುಸ್ಥಾಪನೆ ನೆರವೇರಿಸಿದರು. ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

ದೇಶದ ಮೊದಲ ಎಲ್‌ಎನ್‌ಜಿ ಚಾಲಿತ ಈ ರೈಲು ಡೀಸೆಲ್ ಮತ್ತು ದ್ರವೀಕೃತ ನೈಸರ್ಗಿಕ ಅನಿಲದ ದ್ವಿ-ಇಂಧನ ವ್ಯವಸ್ಥೆಯನ್ನು ಹೊಂದಿದ್ದು, ತಲಾ ೧,೪೦೦ ಅಶ್ವಶಕ್ತಿ ಸಾಮರ್ಥ್ಯದ ಎರಡು ಚಾಲನಾ ಪವರ್ ಕಾರ್‌ಗಳನ್ನು ಒಳಗೊಂಡಿದೆ. ಇದರಿಂದ ಸಾಂಪ್ರದಾಯಿಕ ಡೀಸೆಲ್ ಬಳಕೆಯನ್ನು ಸುಮಾರು ೪೦ ಪ್ರತಿಶತದಷ್ಟು ಕಡಿಮೆ ಮಾಡಲು ಸಾಧ್ಯವಾಗಲಿದೆ. ಈ ಯೋಜನೆ ದೇಶದ ಹಸಿರು ಸಾರಿಗೆ ವ್ಯವಸ್ಥೆ ಹಾಗೂ ನಿವ್ವಳ ಶೂನ್ಯ ಇಂಗಾಲ ಹೊರಸೂಸುವಿಕೆ ಗುರಿಯತ್ತ ಮಹತ್ವದ ಹೆಜ್ಜೆಯಾಗಿದೆ.

ಬಳಿಕ ಬೃಹತ್ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಅಮಿತ್ ಶಾ, ಭಾರತೀಯ ರೈಲ್ವೆಯು ಕಳೆದ ೧೨ ವರ್ಷಗಳಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಗಮನಾರ್ಹ ಪರಿವರ್ತನೆ ಕಂಡಿದೆ. ರೈಲ್ವೆ ವಿದ್ಯುದೀಕರಣ ಕ್ರಮ ವೇಗವಾಗಿ ಸಾಗುತ್ತಿದ್ದು ೨೦೧೪-೧೫ ರಲ್ಲಿ ಡೀಸೆಲ್ ಬಳಕೆ ೨೯೩ ಕೋಟಿ ಲೀಟರ್ ನಷ್ಟಿದ್ದು ಈಗ ೧೦೮ ಕೋಟಿ ಲೀಟರ್‌ಗೆ ತಗ್ಗಿದೆ. ಸಂಪೂರ್ಣವಾಗಿ ಡೀಸೆಲ್ ಬಳಕೆ ನಿಲ್ಲಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಭಾರತವು ಹೆಚ್ಚಿನ ಸಾಮರ್ಥ್ಯದ ಡಬ್ಲ್ಯು ಎಜಿ-೧೨ ವಿದ್ಯುತ್ ಇಂಜಿನ್‌ಗಳು, ಪ್ರತ್ಯೇಕ ಸರಕು ಸಾಗಣೆ ಮಾರ್ಗಗಳು ಹಾಗೂ ಸ್ವದೇಶಿ ಸುರಕ್ಷತಾ ವ್ಯವಸ್ಥೆ 'ಕವಚ' ಸೇರಿದಂತೆ ಆಧುನಿಕ ರೈಲ್ವೆ ಮೂಲಸೌಕರ್ಯ ವಲಯದಲ್ಲಿ ತ್ವರಿತ ಪ್ರಗತಿ ಸಾಧಿಸುತ್ತಿದೆ ಎಂದು ಅಮಿತ್ ಶಾ ಹೇಳಿದರು.

---

ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಇಂದು ಕೇರಳದ ಕೊಲ್ಲಂ ಜಿಲ್ಲೆಯ ಅಮೃತಪುರಿಯಲ್ಲಿ ನಡೆದ ಮಾತಾ ಅಮೃತಾನಂದಮಯಿ ಅವರ ೭೩ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡರು.

ಬಳಿಕ ಮಾತನಾಡಿದ ಅವರು, ಮಾತಾ ಅಮೃತಾನಂದಮಯಿ ಅವರ ಇಡೀ ಜೀವನವೇ ಮನುಕುಲಕ್ಕೆ ಪ್ರೀತಿ ಮತ್ತು ಸೇವೆಯ ಸಂದೇಶವಾಗಿದೆ ಎಂದರು. ಆಹಾರ, ವಸ್ತ್ರ ಮತ್ತು ವಸತಿಯ ಬಡತನ ಹಾಗೂ ಪ್ರೀತಿ ಮತ್ತು ಕರುಣೆಯ ಬಡತನ ಹೋಗಲಾಡಿಸಲು ಅವರು ತಮ್ಮ ಜೀವನ ಮುಡಿಪಾಗಿಟ್ಟಿದ್ದಾರೆ ಎಂದು ಉಪರಾಷ್ಟ್ರಪತಿ ತಿಳಿಸಿದರು.

ನೇಪಾಳದಲ್ಲಿ ಹಠಾತ್ ಪ್ರವಾಹ ಪೀಡಿತ ಪ್ರದೇಶಗಳ ಪರಿಹಾರ ಕಾರ್ಯಗಳಿಗಾಗಿ ಮಾತಾ ಅಮೃತಾನಂದಮಯಿ ಮಠದ ವತಿಯಿಂದ ೨ ಕೋಟಿ ರೂಪಾಯಿ ಆರ್ಥಿಕ ನೆರವಿನ ಚೆಕ್ ಅನ್ನು ಭಾರತದಲ್ಲಿನ ನೇಪಾಳದ ರಾಯಭಾರಿ ಸುರೇಂದ್ರ ಥಾಪಾ ಅವರಿಗೆ ಉಪರಾಷ್ಟ್ರಪತಿ ಹಾಗೂ ಮುಖ್ಯಮಂತ್ರಿ ವಿ.ಡಿ.ಸತೀಶನ್ ಹಸ್ತಾಂತರಿಸಿದರು.

---

ದೇಶಾದ್ಯಂತ ನಡೆಯುತ್ತಿರುವ ಜನಗಣತಿಯ ಮೊದಲ ಹಂತ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಬಹುತೇಕ ಪೂರ್ಣಗೊಂಡಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಆಕಾಶವಾಣಿಯ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ೩೨ ಕೋಟಿಗೂ ಹೆಚ್ಚು ಕುಟುಂಬಗಳ ಮಾಹಿತಿಯನ್ನು ಈಗಾಗಲೇ ದಾಖಲಿಸಲಾಗಿದೆ. ಲಡಾಖ್, ಹಿಮಾಚಲ ಪ್ರದೇಶ, ಜಮ್ಮು-ಕಾಶ್ಮೀರ ಮತ್ತು ಉತ್ತರಾಖಂಡದ ಹಿಮಾವೃತ ಹಾಗೂ ದೂರದ ಪ್ರದೇಶಗಳಲ್ಲೂ ಜನಗಣತಿ ಕಾರ್ಯ ನಡೆದಿದೆ ಎಂದರು.

ಜನಗಣತಿ ಪ್ರತಿಯೊಬ್ಬರ ಹೊಣೆಗಾರಿಕೆಯಾಗಿದ್ದು, ಮೊಬೈಲ್ ಮೂಲಕ ಸ್ವಯಂ ವಿವರ ನೋಂದಾಯಿಸುವ ವ್ಯವಸ್ಥೆ ಅತ್ಯಂತ ಅನುಕೂಲಕರವಾಗಿದೆ ಎಂದು ತಿಳಿಸಿದ ಅವರು, ಹಿಂದಿಯೊಂದಿಗೆ ೧೬ ಭಾಷೆಗಳಲ್ಲಿ ಈ ಆನ್‌ಲೈನ್ ಸೌಲಭ್ಯ ಲಭ್ಯವಿದೆ ಎಂದರು.

ನಾಳೆ ಸರ್ಜಿಕಲ್ ಸ್ಟ್ರೈಕ್‌ನ ೧೦ನೇ ವಾರ್ಷಿಕೋತ್ಸವವಾಗಿದ್ದು, ಭಯೋತ್ಪಾದಕರ ಅಡಗುತಾಣಗಳ ಮೇಲೆ ಭಾರತೀಯ ಸೇನೆ ನಡೆಸಿದ ಸರ್ಜಿಕಲ್ ಸ್ಟ್ರೈಕ್, ಭಯೋತ್ಪಾದನೆ ವಿರುದ್ಧ ಭಾರತದ ನೀತಿಗೆ ಹೊಸ ಆಯಾಮವನ್ನು ಜಗತ್ತಿಗೆ ತೋರಿಸಿತು ಎಂದು ಪ್ರಧಾನಮಂತ್ರಿ ಅಭಿಪ್ರಾಯಪಟ್ಟರು. ಇದೇ ವೇಳೆ ಇತಿಹಾಸದ ದಾಳಿಗಳನ್ನೂ, ಅದಕ್ಕೆ ಆಗಿನ ಕಾಲದ ಪ್ರತಿರೋಧಗಳನ್ನೂ ಅವರು ಪ್ರಸ್ತಾಪಿಸಿದ್ದಾರೆ.

ಗಾಂಧೀಜಿ ಜಯಂತಿ ಬಗ್ಗೆ ಮಾತನಾಡುತ್ತಾ, ಬಾಪೂಜಿ ನೀಡಿದ ಹಲವು ಜೀವನ ಮಾರ್ಗದರ್ಶಕ ತತ್ವಗಳಲ್ಲಿ ಸ್ವಚ್ಛತೆಯೂ ಒಂದಾಗಿದ್ದು, ದೇಶದ ವಿವಿಧೆಡೆ ಸ್ವಚ್ಛತೆಗಾಗಿ ಕೈಗೊಂಡಿರುವ ವಿವಿಧ ಕ್ರಮಗಳು ಶ್ಲಾಘನೀಯ ಎಂದರು.

ಅಸ್ಸಾಂನ ಸೋನಾಯಿ ರೂಪಾಯಿ ವನ್ಯಜೀವಿ ಅಭಯಾರಣ್ಯದಲ್ಲಿ ಅತಿಕ್ರಮಣ ತೆರವು; ಅಳಿವಿನಂಚಿನಲ್ಲಿದ್ದ ಪಿಗ್ಮಿ ಹಂದಿ ಸಂರಕ್ಷಣೆಗೆ ಕೈಗೊಂಡಿರುವ ಕ್ರಮಗಳ ಬಗ್ಗೆಯೂ ಪ್ರಧಾನಿ ಪ್ರಸ್ತಾಪಿಸಿದರು. ಪಶ್ಚಿಮ ಬಂಗಾಳದ ಸುಂದರ್‌ಬನ್ ನಲ್ಲಿ ಮಹಿಳೆಯರು ಮ್ಯಾಂಗ್ರೂವ್ ಅರಣ್ಯ ಬೆಳೆಸುತ್ತಿರುವುದನ್ನು ಶ್ಲಾಘಿಸಿದರು. ಪರಿಸರವನ್ನು ಸಂರಕ್ಷಿಸಿ, ಪ್ರಕೃತಿಯ ಸಮತೋಲನವನ್ನು ಗೌರವಿಸುವ ಹಾಗೂ ಜೀವವೈವಿಧ್ಯವನ್ನು ಕಾಪಾಡುವಂತೆ ಪ್ರಧಾನಮಂತ್ರಿ ಮೋದಿ ಕರೆ ನೀಡಿದರು.

ವಿವಿಧ ಪ್ರದೇಶಗಳ ವಿಶಿಷ್ಟ ಉತ್ಪನ್ನಗಳು, 'ನಶಾ ಮುಕ್ತ ಯುವ ಅಭಿಯಾನ', ಪೋಷಣ್ ಅಭಿಯಾನದಡಿಯ ಉಪಕ್ರಮಗಳನ್ನು ಅವರು ಪ್ರಸ್ತಾಪಿಸಿದರು. ಕ್ರೀಡಾ ಪ್ರತಿಭೆ ಪೋಷಿಸುವ ಅಗತ್ಯದ ಬಗ್ಗೆಯೂ ಅವರು ಒತ್ತಿ ಹೇಳಿದರು.

---

ನ್ಯಾನೋ ಔಷಧ ಮುಂದಿನ ಪೀಳಿಗೆಯ ನಿಖರ ವೈದ್ಯಕೀಯ ಹಾಗೂ ವೈಯಕ್ತಿಕೀಕೃತ ಆರೋಗ್ಯ ಸೇವೆಗೆ ಪ್ರಮುಖ ಚಾಲಕವಾಗಲಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಜಿತೇಂದ್ರ ಸಿಂಗ್ ಹೇಳಿದ್ದಾರೆ.

ನವದೆಹಲಿಯಲ್ಲಿಂದು ನಡೆದ ವಿಶ್ವ ನ್ಯಾನೋ ಮೆಡಿಸಿನ್ ಸಮಾವೇಶದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಜೈವಿಕ ತಂತ್ರಜ್ಞಾನ ಇಲಾಖೆ ನ್ಯಾನೋ ಔಷಧ ಕ್ಷೇತ್ರದ ೨೧೦ ಸಂಶೋಧನೆ ಮತ್ತು ಅಭಿವೃದ್ಧಿ ಯೋಜನೆಗಳಿಗೆ ೧೭೪ ಕೋಟಿ ರೂಪಾಯಿ ಆರ್ಥಿಕ ನೆರವು ನೀಡುತ್ತಿದೆ ಎಂದರು.

ನ್ಯಾನೋ ಮಟ್ಟದಲ್ಲಿ ಅಂದರೆ ಶತಕೋಟಿಯ ಒಂದು ಭಾಗದ ಪ್ರಮಾಣದ ಈ ಔಷಧಗಳು ರೋಗಿಯ ಆನುವಂಶಿಕ ಗುಣಲಕ್ಷಣ, ಜೀವನಶೈಲಿ, ಆಹಾರ ಪದ್ಧತಿ ಮತ್ತು ಪರಿಸರ ಅಂಶಗಳನ್ನು ಆಧರಿಸಿ ಚಿಕಿತ್ಸೆ ನೀಡುವ ಕ್ರಮವಾಗಿದೆ ಎಂದು ಸಚಿವರು ಹೇಳಿದರು.

ಈ ಕ್ಷೇತ್ರದಲ್ಲಿ ಭಾರತ ಈಗಾಗಲೇ ಪ್ರಗತಿ ಸಾಧಿಸುತ್ತಿದ್ದು, ಭವಿಷ್ಯದ ಆರೋಗ್ಯ ಸೇವಾ ಪರಿಹಾರಗಳನ್ನು ಅಭಿವೃದ್ಧಿಪಡಿಸುವ ವೈಜ್ಞಾನಿಕ ಮತ್ತು ಸಾಂಸ್ಥಿಕ ಸಾಮರ್ಥ್ಯವನ್ನು ಹೊಂದಿದೆ ಎಂದು ಜಿತೇಂದ್ರ ಸಿಂಗ್ ತಿಳಿಸಿದರು.

---

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸಾರ್ವಜನಿಕ ಸೇವೆಯಲ್ಲಿ ೨೫ ವರ್ಷ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ, ದೇಶಾದ್ಯಂತ ಹಮ್ಮಿಕೊಳ್ಳಲಾಗಿರುವ 'ಸೇವಾ ಸಂಕಲ್ಪ ಅಭಿಯಾನದಡಿ ವಿವಿಧ ವಲಯಗಳಲ್ಲಿ ಕೈಗೊಂಡಿರುವ ಮಹತ್ವದ ಸುಧಾರಣೆಗಳ ಕುರಿತ ಸರಣಿಯನ್ನು ಆಕಾಶವಾಣಿ ಪ್ರಸಾರ ಮಾಡುತ್ತಿದೆ. ಇಂದು 'ಜಿಎಸ್‌ಟಿ ಒಂದು ರಾಷ್ಟ್ರ ಒಂದು ತೆರಿಗೆ' ಬಗ್ಗೆ ಕಿರು ಅವಲೋಕನ.

ದೇಶದಲ್ಲಿ ಜಾರಿಯಲ್ಲಿದ್ದ ೧೭ ವಿವಿಧ ಪರೋಕ್ಷ ತೆರಿಗೆಗಳು ಮತ್ತು ೧೩ ಸೆಸ್‌ಗಳನ್ನು ವಿಲೀನಗೊಳಿಸಿ ೨೦೧೭ರ ಜುಲೈ ೧ ರಂದು ಸರಕು ಮತ್ತು ಸೇವಾ ತೆರಿಗೆ-ಜಿಎಸ್‌ಟಿ ಅನ್ನು ಜಾರಿಗೆ ತರಲಾಯಿತು. ೯ ವರ್ಷಗಳ ಅವಧಿಯಲ್ಲಿ ಜಿಎಸ್‌ಟಿ ಅಡಿ ೧ ಕೋಟಿ ೬೫ ಲಕ್ಷಕ್ಕೂ ಹೆಚ್ಚು ನೋಂದಣಿಗಳಾಗಿದ್ದು, ಇದು ಆರ್ಥಿಕತೆ ಹೆಚ್ಚು ವ್ಯವಸ್ಥಿತವಾಗುತ್ತಿದೆ ಎಂಬುದಕ್ಕೆ ನಿದರ್ಶನವಾಗಿದೆ.

ಜಿಎಸ್‌ಟಿ ಅಡಿ ಸುಧಾರಣೆಗಳ ಮೂಲಕ ತೆರಿಗೆ ದರ ಸರಳಗೊಳಿಸಲಾಗುತ್ತಿದೆ. ದೈನಂದಿನ ಅಗತ್ಯ ವಸ್ತುಗಳ ಮೇಲೆ ಶೂನ್ಯ ತೆರಿಗೆ ಅಥವಾ ಕಡಿಮೆ ತೆರಿಗೆ ವಿಧಿಸಲಾಗುತ್ತಿದ್ದು, ಸಾಮಾನ್ಯ ಜನರಿಗೆ ಅನುಕೂಲವಾಗಿದೆ.

ಈ ಹಿಂದೆ ಅಂತರ ರಾಜ್ಯ ವಹಿವಾಟುಗಳಿಗೆ ಬೇರೆ ತೆರಿಗೆ ಪದ್ಧತಿಯಿದ್ದು, ಪ್ರತ್ಯೇಕವಾದ ಫಾರಂಗಳನ್ನು ಸಲ್ಲಿಸಬೇಕಾಗಿತ್ತು. ಈಗ ಪ್ರತ್ಯೇಕ ನಿಯಮ ಅನುಸರಣೆಗಳ ಹೊರೆ ತಪ್ಪಿದೆ.

ಜಿಎಸ್‌ಟಿ ಕಾಯ್ದೆಯಡಿ ಸುಧಾರಣೆಗಳನ್ನು ತರಲು ಆಗ್ಗಾಗ್ಗೆ, ಜಿಎಸ್‌ಟಿ ಮಂಡಳಿ ಸಭೆ ನಡೆಸಲಾಗುವುದು. ಮುಂದಿನ ತಿಂಗಳ ೭ ರಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಧ್ಯಕ್ಷತೆಯಲ್ಲಿ ೫೭ನೇ ಜಿಎಸ್‌ಟಿ ಮಂಡಳಿ ಸಭೆ ನಿಗದಿಯಾಗಿದ್ದು, ಇ-ಇನ್ವಾಯ್ಸಿಂಗ್ ಸರಳಗೊಳಿಸುವ ಕುರಿತು ಚರ್ಚೆ ನಿರೀಕ್ಷಿಸಲಾಗಿದೆ. ಇತ್ತೀಚೆಗೆ ಯುಪಿಐ ವಹಿವಾಟುಗಳ ಮೇಲೆ ವರ್ತಕರಿಗೆ ಶುಲ್ಕವಿಧಿಸುವ ನಿಯಮ ಜಾರಿಗೆ ತರುವುದಾಗಿ ಸರ್ಕಾರ ಪ್ರಕಟಿಸಿದ್ದು, ಈ ಶುಲ್ಕದ ಮೇಲೆ ಜಿಎಸ್‌ಟಿ ವಿಧಿಸುವ ಸಂಬಂಧ ಕೂಡ ಚರ್ಚೆ ನಡೆಯುವ ಸಾಧ್ಯತೆ ಇದೆ.

ದೇಶಾದ್ಯಂತ ಪಾರದರ್ಶಕವಾದ ಏಕರೂಪದ ತೆರಿಗೆ ವ್ಯವಸ್ಥೆ ಜಾರಿಯಲ್ಲಿದೆ.

---

ತಿರುವನಂತಪುರದಲ್ಲಿ ನಡೆಯುತ್ತಿರುವ ಭಾರತ ಮತ್ತು ವೆಸ್ಟ್ ಇಂಡೀಸ್ ನಡುವಿನ ಮೂರು ಪಂದ್ಯಗಳ ಸರಣಿಯ ಮೊದಲ ಏಕದಿನ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ವೆಸ್ಟ್ ಇಂಡೀಸ್ ನಿಗದಿತ ೫೦ ಓವರ್‌ಗಳಲ್ಲಿ ೭ ವಿಕೆಟ್ ನಷ್ಟಕ್ಕೆ ೨೯೫ ರನ್ ಗಳಿಸಿದೆ.

ಗುರಿ ಬೆನ್ನತ್ತಿರುವ ಭಾರತ, ಇತ್ತೀಚಿನ ವರದಿ ಬಂದಾಗ ೧೭.೪ ಓವರ್‌ಗಳಲ್ಲಿ ೧ ವಿಕೆಟ್ ನಷ್ಟಕ್ಕೆ ೧೧೦ ರನ್ ಗಳಿಸಿ ಆಡುತ್ತಿದೆ.

ಎರಡನೇ ಏಕದಿನ ಪಂದ್ಯ ಇದೇ ೩೦ರಂದು ಗುವಾಹಟಿಯಲ್ಲಿ ಹಾಗೂ ಮೂರನೇ ಪಂದ್ಯ ಅಕ್ಟೋಬರ್ ೩ರಂದು ನ್ಯೂ ಚಂಡೀಗಢದಲ್ಲಿ ನಡೆಯಲಿದೆ.

ಏಕದಿನ ಸರಣಿಯ ಬಳಿಕ ಐದು ಪಂದ್ಯಗಳ ಟಿ-೨೦ ಸರಣಿ ಮುಂದಿನ ತಿಂಗಳ ೪ ರಿಂದ ೧೭ರ ವರೆಗೆ ನಡೆಯಲಿದೆ.

__________ ಮುಕ್ತಾಯ __________